# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1129 |
| ಮಾನ್ಯ ಸದಸ್ಯರ ಹೆಸರು | : | ಶ್ರೀ ಕಿಶೋರ್ ಕುಮಾರ್ ಪುತ್ತೂರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : | 16-12-2025 |
| ಉತ್ತರಿಸುವ ಸಚಿವರು | : | ಪೌರಾಡಳಿತ ಮತ್ತು ಹಜ್ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯಲ್ಲಿರುವ ಪಟ್ಟಣ ಪಂಚಾಯತ್, ಪುರಸಭೆ, ನಗರಸಭೆಗಳ ವ್ಯಾಪ್ತಿಯಲ್ಲಿ ಪ್ರತಿ ಮನೆ ಮತ್ತು ಅಂಗಡಿಗಳಿಂದ ಒಣ ಮತ್ತು ಹಸಿಕಸವನ್ನು ಸಂಗ್ರಹಿಸಲಾಗುತ್ತಿದೆಯೇ? ಪ್ರತಿ ಸ್ಥಳೀಯ ಸಂಸ್ಥೆವಾರು ಇರುವ ಒಟ್ಟು ಅಂಗಡಿ ಮತ್ತು ಮನೆಗಳು ಎಷ್ಟು ಕಸ ಸಂಗ್ರಹವಾಗುತ್ತಿರುವ ಅಂಗಡಿ ಮತ್ತು ಮನೆಗಳು ಎಷ್ಟು? | • ಹೌದು, ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯಲ್ಲಿರುವ ಪಟ್ಟಣ ಪಂಚಾಯತ್, ಪುರಸಭೆ, ನಗರಸಭೆಗಳ ವ್ಯಾಪ್ತಿಯಲ್ಲಿ ಪ್ರತಿ ಮನೆ ಮತ್ತು ಅಂಗಡಿಗಳಿಂದ ಒಣ ಮತ್ತು ಹಸಿಕಸವನ್ನು ಸಂಗ್ರಹಿಸಲಾಗುತ್ತಿದೆ.<br>• ಸ್ಥಳೀಯ ಸಂಸ್ಥೆವಾರು ಇರುವ ಅಂಗಡಿ ಮತ್ತು ಮನೆಗಳ ವಿವರ ಹಾಗೂ ಕಸ ಸಂಗ್ರಹಣೆ ವಿವರವನ್ನು **ಅನುಬಂಧ-1** ರಲ್ಲಿ ಒದಗಿಸಿದೆ. |
| ಆ) | ಕಸ ಸಂಗ್ರಹಣೆಗೆ ಶುಲ್ಕ ವಿಧಿಸಲು ನಿಯಮಗಳಿದೆಯೇ? ಸದರಿ ನಿಯಮಗಳಂತೆ ಶುಲ್ಕವನ್ನು ಸಂಗ್ರಹಿಸಲಾಗುತ್ತಿದೆಯೇ? (ವಿವರ ನೀಡುವುದು) ಉಭಯ ಜಿಲ್ಲೆಗಳಲ್ಲಿ ಪ್ರಸ್ತುತ ಸಾಲಿನಲ್ಲಿ ವಿವಿಧ ನಗರ ಸ್ಥಳೀಯ ಸಂಸ್ಥೆಗಳಿಂದ ಸಂಗ್ರಹಿಸಲಾದ ಕಸ ಸಂಗ್ರಹಣೆ ಶುಲ್ಕವೆಷ್ಟು? (ಪ್ರತಿ ಸ್ಥಳೀಯ ಸಂಸ್ಥೆವಾರು ವಿವರ ನೀಡುವುದು) | • ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಉತ್ಪತ್ತಿಯಾಗುತ್ತಿರುವ ತ್ಯಾಜ್ಯ ವಸ್ತುಗಳ ನಿರ್ವಹಣೆಗಾಗಿ ನಿಯಮಾನುಸಾರ ಮಾದರಿ ಬೈಲಾಗಳನ್ನು 2019ನೇ ಸಾಲಿನಲ್ಲಿ ಹೊರಡಿಸಲಾಗಿದ್ದು, ಸದರಿ ಬೈಲಾಗಳನ್ನು ನಗರ ಸ್ಥಳೀಯ ಸಂಸ್ಥೆಗಳಲ್ಲಿ ಅಳವಡಿಸಿಕೊಂಡು ತ್ಯಾಜ್ಯ ಸಂಗ್ರಹಣೆ ಶುಲ್ಕವನ್ನು ಪಾವತಿಸಿಕೊಳ್ಳಲಾಗುತ್ತಿದೆ.<br>• ಸ್ಥಳೀಯ ಸಂಸ್ಥೆವಾರು ಸಂಗ್ರಹಣೆಯಾಗಿರುವ ಶುಲ್ಕದ ವಿವರವನ್ನು **ಅನುಬಂಧ-2** ರಲ್ಲಿ ಒದಗಿಸಿದೆ. |
| ಇ) | ಸದರಿ ಜಿಲ್ಲೆಗಳ ನಗರ ಸ್ಥಳೀಯ ಸಂಸ್ಥೆಗಳಲ್ಲಿ ತ್ಯಾಜ್ಯ ವಿಲೇವಾರಿಗಾಗಿ ಪೌರಕಾರ್ಮಿಕರನ್ನು ನೇಮಿಸಲಾಗಿದೆಯೇ? ಯಾವ ಆಧಾರದ ಮೇಲೆ ನೇಮಕಾತಿ ಮಾಡಲಾಗಿದೆ? ಖಾಯಂ ಹಾಗೂ ಹೊರಗುತ್ತಿಗೆ ಮತ್ತು ಖಾಲಿ ಇರುವ ಪೌರಕಾರ್ಮಿಕರ ಹುದ್ದೆಗಳು ಎಷ್ಟು? ಪೌರಕಾರ್ಮಿಕರಿಗೆ ನೀಡುತ್ತಿರುವ ವೇತನ ಮತ್ತು ಸೌಲಭ್ಯಗಳು ಏನು? ಸದರಿ | ಹೌದು.<br>• ಪೌರಸೇವಾ ವೃಂದದ ವೃಂದ ಮತ್ತು ನೇಮಕಾತಿ ನಿಯಮಗಳನ್ವಯ ಪೌರಕಾರ್ಮಿಕರ ಹುದ್ದೆಗಳನ್ನು ನಗರ ಸ್ಥಳೀಯ ಸಂಸ್ಥೆಗಳಿಗೆ ಶೇ. 50 ರಷ್ಟು ನೇರ ನೇಮಕಾತಿ ಹಾಗೂ ಶೇ. 50 ರಷ್ಟು ನೇರ ಪಾವತಿ ಮೂಲಕ ಭರ್ತಿ ಮಾಡಲು ಅವಕಾಶ ಕಲ್ಪಿಸಲಾಗಿರುತ್ತದೆ.<br>• ಸರ್ಕಾರದ ಆದೇಶ ಸಂಖ್ಯೆ: ನಅಇ 126 ಟಿಎಂಎಸ್ 2016, ದಿನಾಂಕ: 07-08-2017ರಲ್ಲಿ ಸ್ವಚ್ಛತಾ ಕಾರ್ಯಕ್ಕೆ ಪೌರಕಾರ್ಮಿಕರನ್ನು ಹೊರಗುತ್ತಿಗೆ ಮೂಲಕ ಪಡೆಯುವುದನ್ನು ರದ್ದುಪಡಿಸಿ, 700 ಜನಸಂಖ್ಯೆಗೆ ಒಬ್ಬ ಪೌರಕಾರ್ಮಿಕರನ್ನು ನಿಗಧಿಪಡಿಸಲಾಗಿರುತ್ತದೆ.<br>• ದಕ್ಷಿಣ ಕನ್ನಡ ಜಿಲ್ಲೆಗೆ ಒಟ್ಟು 497 ಹಾಗೂ ಉಡುಪಿ ಜಿಲ್ಲೆಗೆ |

<table>
<tr>
<td></td>
<td>ಜಿಲ್ಲೆಗಳ ಪೌರಕಾರ್ಮಿಕರನ್ನು ಖಾಯಂಗೊಳಿಸುವಂತೆ ಸಲ್ಲಿಸಲಾದ ಯಾವುದಾದರೂ ಪ್ರಸ್ತಾವನೆ ಅನುಮೋದನೆಗೆ ಸರ್ಕಾರದ ಹಂತದಲ್ಲಿ ಬಾಕಿ ಇದೆಯೇ? (ವಿವರ ನೀಡುವುದು)</td>
<td>ಒಟ್ಟು 369 ಪೌರಕಾರ್ಮಿಕರ ಹುದ್ದೆ ಮಂಜೂರಾಗಿರುತ್ತದೆ. ಪೌರಕಾರ್ಮಿಕರ ವಿವರ ಈ ಕೆಳಗಿನಂತಿದೆ:
<table>
<tr><th>ಜಿಲ್ಲೆ</th><th>ಖಾಯಂ</th><th>ನೇರ ಪಾವತಿ</th><th>ಒಟ್ಟು</th><th>ಖಾಲಿ ಹುದ್ದೆ</th></tr>
<tr><td>ದಕ್ಷಿಣ ಕನ್ನಡ</td><td>231</td><td>80</td><td>311</td><td>186</td></tr>
<tr><td>ಉಡುಪಿ</td><td>252</td><td>14</td><td>266</td><td>103</td></tr>
</table>
<ul>
<li>ಖಾಯಂ ನೌಕರರಿಗೆ ರಾಜ್ಯ ವೇತನ ಆಯೋಗದ ಶಿಫಾರಸ್ಸಿನಂತೆ ವೇತನ ಪರಿಷ್ಕರಿಸಿ ಸರ್ಕಾರದಿಂದ ಕಾಲಕಾಲಕ್ಕೆ ಹೊರಡಿಸುವ ಆದೇಶಗಳನುಸಾರ ವೇತನ ಸೌಲಭ್ಯ ನೀಡಲಾಗುತ್ತಿದೆ ಹಾಗೂ ದಿನಗೂಲಿ / ನೇರಪಾವತಿ ಪೌರಕಾರ್ಮಿಕರಿಗೆ ಕಾರ್ಮಿಕ ಇಲಾಖೆಯು 2025-26ನೇ ಸಾಲಿಗೆ ನಿಗದಿಪಡಿಸಿರುವ ಕನಿಷ್ಟ ವೇತನದ ಪ್ರಕಾರ ನಗರಸಭೆ ಗ್ರೇಡ್-1 ರೂ. 22896/-, ನಗರಸಭೆ ಗ್ರೇಡ್-2 ಹಾಗೂ ಪುರಸಭೆ ರೂ. 22398/- ಮತ್ತು ಪಟ್ಟಣ ಪಂಚಾಯಿತಿಗಳಲ್ಲಿ ರೂ. 21899/ ಗಳನ್ನು ನೀಡಲಾಗುತ್ತಿದ್ದು ESI & PF ಸೌಲಭ್ಯವನ್ನು ಕಲ್ಪಿಸಲಾಗಿರುತ್ತದೆ.</li>
<li>ಪೌರಕಾರ್ಮಿಕರ ದಿನಾಚರಣೆ ಅಂಗವಾಗಿ ಖಾಯಂ ಪೌರಕಾರ್ಮಿಕರಿಗೆ ರೂ. 7000/-ಗಳ ವಿಶೇಷ ಭತ್ಯೆಯನ್ನು ನೀಡಲಾಗುತ್ತಿದೆ.</li>
<li>ಸಾರ್ವತ್ರಿಕ ರಜಾ ದಿನಗಳಲ್ಲಿ ಕಾರ್ಯ ನಿರ್ವಹಿಸುವ ನಗರ ಸ್ಥಳೀಯ ಸಂಸ್ಥೆಗಳ ಖಾಯಂ ಪೌರಕಾರ್ಮಿಕರಿಗೆ 21 ದಿನಗಳ ವಿಶೇಷ ರಜಾವೇತನ ಪಾವತಿ ಮಾಡಲಾಗುತ್ತಿದೆ</li>
<li>ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಖಾಯಂ ಪೌರಕಾರ್ಮಿಕರಿಗೆ ರೂ. 2000/- ಮಾಸಿಕ ಸಂಕಷ್ಟ ಭತ್ಯೆ (hardship allowances) ನೀಡಲಾಗುತ್ತಿದೆ.</li>
<li>ಸರ್ಕಾರದ ಆದೇಶ ಸಂಖ್ಯೆ: ನಅಇ 57 TMS 2024 (ಇ), ದಿನಾಂಕ: 27.09.2024 ರಲ್ಲಿ ನೇರ ಪಾವತಿಯಡಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಪೌರಕಾರ್ಮಿಕರನ್ನು ಖಾಯಂಗೊಳಿಸಲು 1100 ಹುದ್ದೆಗಳನ್ನು ಹಂಚಿಕೆ ಮಾಡಲಾಗಿರುವಂತೆ ಪೌರಾಡಳಿತ ನಿರ್ದೇಶನಾಲಯದ ಆದೇಶ ದಿನಾಂಕ: 23.10.2024 ರಲ್ಲಿ ದಕ್ಷಿಣ ಕನ್ನಡ ಜಿಲ್ಲೆಗೆ 44 ಹಾಗೂ ಉಡುಪಿ ಜಿಲ್ಲೆಗೆ 20 ಹುದ್ದೆಗಳನ್ನು ಹಂಚಿಕೆ ಮಾಡಿದ್ದು ಜಿಲ್ಲಾಧಿಕಾರಿಗಳ ಹಂತದಲ್ಲಿ ನೇಮಕಾತಿಗೆ ಕ್ರಮ ಕೈಗೊಳ್ಳಲು ನಿರ್ದೇಶನ ನೀಡಲಾಗಿರುತ್ತದೆ.</li>
<li>ಪೌರಾಡಳಿತ ನಿರ್ದೇಶನಾಲಯದ ದಿನಾಂಕ: 18.11.2025ರ ಸುತ್ತೋಲೆಯಲ್ಲಿ ರಾಜ್ಯದ ನಗರಸಭೆಗಳಲ್ಲಿ ನೇರಪಾವತಿ ಅಡಿಯಲ್ಲಿ ಖಾಲಿಯಿರುವ ಪೌರಕಾರ್ಮಿಕರ ಹುದ್ದೆಗಳನ್ನು ಭರ್ತಿಮಾಡಲು ಜಿಲ್ಲಾಧಿಕಾರಿಗಳಿಗೆ ನಿರ್ದೇಶನ</li>
</ul>
</td>
</tr>
</table>

| | | |
|---|---|---|
| | | ನೀಡಲಾಗಿರುತ್ತದೆ. |
| ಈ) | ಸಂಗ್ರಹಿಸಲಾದ ಒಣ ಮತ್ತು ಹಸಿ ಕಸವನ್ನು ಹೇಗೆ ವಿಲೇವಾರಿ ಮಾಡಲಾಗುತ್ತಿದೆ? MRF ಘಟಕವನ್ನು ನಿರ್ಮಿಸಲಾಗಿದೆಯೇ? ನಿರ್ಮಿಸಿದ್ದಲ್ಲಿ ಅದರ ಸಾಮರ್ಥ್ಯವೆಷ್ಟು? ಸದರಿ MRF ಘಟಕಕ್ಕೆ ಒಳಪಡುವ ಸ್ಥಳೀಯ ಸಂಸ್ಥೆಗಳು ಯಾವುವು? ಅದನ್ನು ನಿರ್ವಹಿಸುತ್ತಿರುವವರು ಯಾರು? MRF ಘಟಕ ನಿರ್ಮಿಸಲು ಬಾಕಿ ಇರುವ ಪ್ರದೇಶಗಳು ಯಾವುವು? CNG ಘಟಕ ಪ್ರಾರಂಭಿಸಲಾಗಿದೆಯೇ? (ಮಾಹಿತಿ ನೀಡುವುದು) | • ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಉತ್ಪತ್ತಿಯಾಗುತ್ತಿರುವ ಹಸಿ ತ್ಯಾಜ್ಯವನ್ನು Windrow Platform ಮತ್ತು Vermi Composting ವಿದಾನದಲ್ಲಿ ಸಂಸ್ಕರಿಸಲಾಗುತ್ತಿದೆ. ಒಣತ್ಯಾಜ್ಯವನ್ನು ವಿಂಗಡಿಸಿ, ಮರುಬಳಕೆ ಮಾಡಬಹುದಾದ ಒಣತ್ಯಾಜ್ಯವನ್ನು ಅಧಿಕೃತ ಮರುಬಳಕೆದಾರರಿಗೆ ಮಾರಾಟ ಮಾಡಲಾಗುತ್ತಿದೆ. ಉಳಿಕೆ ತ್ಯಾಜ್ಯವನ್ನು ನಿಯಮಾನುಸಾರ ಸಿಮೆಂಟ್ ಕಾರ್ಖಾನೆಗಳಿಗೆ ರವಾನಿಸಲಾಗುತ್ತಿದೆ.<br>• ಮುಂದುವರೆದು MRF ಘಟಕಕ್ಕೆ ಸಂಬಂಧಿಸಿದ ಕಾಮಗಾರಿಗಳು ನಿರ್ಮಾಣದ ಹಂತಗಳಲ್ಲಿದ್ದು, ನಿರ್ಮಾಣದ ನಂತರ ನಿರ್ವಹಣೆಯನ್ನು ನಿಯಮಾನುಸಾರ ನಗರ ಸ್ಥಳೀಯ ಸಂಸ್ಥೆಯೇ ಮಾಡಬೇಕಿರುತ್ತದೆ. ಇದರ ಸಾಮರ್ಥ್ಯ ಮತ್ತು ನಿರ್ವಹಣೆಗೆ ಸಂಬಂಧಿಸಿದ ವಿವರಗಳನ್ನು **ಅನುಬಂಧ-3** ರಲ್ಲಿ ಒದಗಿಸಿದೆ.<br>• ಹಾಗೂ ಸದರಿ ಜಿಲ್ಲೆಗಳಲ್ಲಿನ ಯಾವುದೇ ನಗರ ಸ್ಥಳೀಯ ಸಂಸ್ಥೆಯಲ್ಲಿ CNG ಘಟಕವನ್ನು ನಿರ್ಮಾಣ ಮಾಡಲಾಗುತ್ತಿರುವುದಿಲ್ಲ. ಆದರೆ ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳ ಪಟ್ಟಣ ಪಂಚಾಯಿತಿಯಲ್ಲಿ ಉತ್ಪತ್ತಿಯಾಗುತ್ತಿರುವ ಹಸಿ ತ್ಯಾಜ್ಯವನ್ನು ಸ್ಥಳೀಯ ಖಾಸಗಿ CNG ಘಟಕಕ್ಕೆ ರವಾನಿಸಲಾಗುತ್ತಿದೆ. |

(ಕಡತ ಸಂಖ್ಯೆ: ನಅಇ 267 ಸಿಎಸ್ಎಸ್ 2025)

**(ರಹೀಂ ಖಾನ್)**
ಪೌರಾಡಳಿತ ಮತ್ತು ಹಜ್ ಸಚಿವರು

| ಅನುಬಂಧ-1 | | | | | | | |
|---|---|---|---|---|---|---|---|
| ಕ್ರ ಸಂ | ಜಿಲ್ಲೆ | ನಗರ ಸ್ಥಳೀಯ ಸಂಸ್ಥೆಯ ಹೆಸರು | ಒಟ್ಟು ಅಂಗಡಿಗಳ ಸಂಖ್ಯೆ | ತ್ಯಾಜ್ಯ ಸಂಗ್ರಹಣೆ ಯಾಗುತ್ತಿರುವ ಅಂಗಡಿಗಳ ಸಂಖ್ಯೆ | ಒಟ್ಟು ಮನೆಗಳ ಸಂಖ್ಯೆ | ತ್ಯಾಜ್ಯ ಸಂಗ್ರಹಣೆ ಯಾಗುತ್ತಿರುವ ಮನೆಗಳ ಸಂಖ್ಯೆ |
| 1 | ದಕ್ಷಿಣ ಕನ್ನಡ | ಮಂಗಳೂರು | 17790 | 17790 | 175724 | 175724 |
| 2 | | ಬಜಪೆ | 83 | 83 | 6493 | 6493 |
| 3 | | ಬಂಟ್ವಾಳ | 3434 | 3434 | 13612 | 13612 |
| 4 | | ಬೆಳ್ತಂಗಡಿ | 739 | 739 | 2854 | 2854 |
| 5 | | ಕಡಬ | 550 | 550 | 3958 | 3958 |
| 6 | | ಕಿನ್ನಿಗೋಳಿ | 764 | 764 | 6854 | 6854 |
| 7 | | ಕೋಟೇಕಾರ್ | 731 | 731 | 6152 | 6152 |
| 8 | | ಮೂಡಬಿದರೆ | 89 | 89 | 14014 | 14014 |
| 9 | | ಮುಲ್ಕಿ | 834 | 834 | 5960 | 5960 |
| 10 | | ಪುತ್ತೂರು | 3358 | 3358 | 16734 | 16734 |
| 11 | | ಸೋಮೇಶ್ವರ | 696 | 696 | 6333 | 6333 |
| 12 | | ಸುಳ್ಯ | 1370 | 1370 | 5527 | 5527 |
| 13 | | ಉಳ್ಳಾಲ | 98 | 98 | 18182 | 18182 |
| 14 | | ವಿಟ್ಲ | 1050 | 1050 | 5842 | 5842 |
| ಒಟ್ಟು | | | **31586** | **31586** | **288239** | **288239** |
| 1 | ಉಡುಪಿ | ಉಡುಪಿ | 13853 | 13853 | 56057 | 56057 |
| 2 | | ಕುಂದಾಪುರ | 1800 | 1800 | 9654 | 9654 |
| 3 | | ಕಾರ್ಕಳ | 2251 | 2251 | 8865 | 8865 |
| 4 | | ಕಾಪು | 920 | 920 | 7397 | 7397 |
| 5 | | ಸಾಲಿಗ್ರಾಮ | 524 | 524 | 4125 | 4125 |
| 6 | | ಬೈಂದೂರು | 980 | 436 | 8870 | 6470 |
| ಒಟ್ಟು | | | **20328** | **19784** | **94968** | **92568** |

| ಅನುಬಂಧ-2 | | | |
|---|---|---|---|
| ಕ್ರ ಸಂ | ಜಿಲ್ಲೆ | ನಗರ ಸ್ಥಳೀಯ ಸಂಸ್ಥೆಯ ಹೆಸರು | **2025-2026 ನೇ ಸಾಲಿಗೆ ಒಟ್ಟು ಸಂಗ್ರಹಿಸಲಾಗಿರುವ ತ್ಯಾಜ್ಯದ ಶುಲ್ಕ Rs in Lakhs** |
| 1 | ದಕ್ಷಿಣ ಕನ್ನಡ | ಮಂಗಳೂರು | 1112.62189 |
| 2 | | ಬಜಪೆ | 8.0164 |
| 3 | | ಬಂಟ್ವಾಳ | 31.87972 |
| 4 | | ಬೆಳ್ತಂಗಡಿ | 8.71 |
| 5 | | ಕಡಬ | 1.59628 |
| 6 | | ಕಿನ್ನಿಗೋಳಿ | 7.22044 |
| 7 | | ಕೋಟೇಕಾರ್ | 15.79 |
| 8 | | ಮೂಡಬಿದರೆ | 36.56852 |
| 9 | | ಮುಲ್ಕಿ | 16.27568 |
| 10 | | ಪುತ್ತೂರು | 27.4126 |
| 11 | | ಸೋಮೇಶ್ವರ | 24.19615 |
| 12 | | ಸೂಳ್ಯ | 20.67597 |
| 13 | | ಉಳ್ಳಾಲ | 57.82947 |
| 14 | | ವಿಟ್ಲ | 10.03359 |
| **Total** | | | **1378.82671** |
| 1 | ಉಡುಪಿ | ಉಡುಪಿ | 80.6 |
| 2 | | ಕುಂದಾಪುರ | 35.75 |
| 3 | | ಕಾರ್ಕಳ | 32.26 |
| 4 | | ಕಾಪು | 28.21 |
| 5 | | ಸಾಲಿಗ್ರಾಮ | 7.87 |
| 6 | | ಬೈಂದೂರು | 13.55 |
| **Total** | | | 198.24 |
| **Grand Total** | | | **1577.06671** |

| ಅನುಬಂಧ-3 | | | | | |
|---|---|---|---|---|---|
| ಕ್ರ ಸಂ | ಜಿಲ್ಲೆ | ನಗರ ಸ್ಥಳೀಯ ಸಂಸ್ಥೆಯ ಹೆಸರು | MRF ಘಟಕದ ಸಾಮರ್ಥ್ಯ ಇನ TPD | MRF ಘಟಕ ನಿರ್ಮಾಣದ ಪ್ರಗತಿಯ ವಿವರ | ಘಟಕದ ನಿರ್ವಹಣೆ |
| 1 | ದಕ್ಷಿಣ ಕನ್ನಡ | ಮಂಗಳೂರು | 109 | ನಿರ್ಮಾಣ ಹಂತದಲ್ಲಿರುತ್ತದೆ | - |
| 2 | | ಬಜಪೆ | 4 | ನಿರ್ಮಾಣ ಪೂರ್ಣಗೊಂಡಿರುತ್ತದೆ | ಪಟ್ಟಣ ಪಂಚಾಯಿತಿ |
| 3 | | ಬಂಟ್ವಾಳ | 6 | ನಿರ್ಮಾಣ ಪೂರ್ಣಗೊಂಡಿರುತ್ತದೆ | ಪುರಸಭೆ |
| 4 | | ಬೆಳ್ತಂಗಡಿ | 2 | ನಿರ್ಮಾಣ ಪೂರ್ಣಗೊಂಡಿರುತ್ತದೆ | ಪಟ್ಟಣ ಪಂಚಾಯಿತಿ |
| 5 | | ಕಡಬ | 2 | ನಿರ್ಮಾಣ ಪೂರ್ಣಗೊಂಡಿರುತ್ತದೆ | ಪಟ್ಟಣ ಪಂಚಾಯಿತಿ |
| 6 | | ಕಿನ್ನಿಗೋಳಿ | 3 | ನಿರ್ಮಾಣ ಪೂರ್ಣಗೊಂಡಿರುತ್ತದೆ | ಪಟ್ಟಣ ಪಂಚಾಯಿತಿ |
| 7 | | ಕೋಟೇಕಾರ್ | 2 | ನಿರ್ಮಾಣ ಪೂರ್ಣಗೊಂಡಿರುತ್ತದೆ | ಪಟ್ಟಣ ಪಂಚಾಯಿತಿ |
| 8 | | ಮೂಡಬಿದರೆ | 5 | ನಿರ್ಮಾಣ ಹಂತದಲ್ಲಿರುತ್ತದೆ | - |
| 9 | | ಮುಲ್ಕಿ | 3 | ನಿರ್ಮಾಣ ಪೂರ್ಣಗೊಂಡಿರುತ್ತದೆ | ಪಟ್ಟಣ ಪಂಚಾಯಿತಿ |
| 10 | | ಪುತ್ತೂರು | 8 | ನಿರ್ಮಾಣ ಪೂರ್ಣಗೊಂಡಿರುತ್ತದೆ | ನಗರಸಭೆ |
| 11 | | ಸೋಮೇಶ್ವರ | 4 | ನಿರ್ಮಾಣ ಹಂತದಲ್ಲಿರುತ್ತದೆ | - |
| 12 | | ಸುಳ್ಯ | 3 | ನಿರ್ಮಾಣ ಹಂತದಲ್ಲಿರುತ್ತದೆ | - |
| 13 | | ಉಳ್ಳಾಲ | 9 | ನಿರ್ಮಾಣ ಹಂತದಲ್ಲಿರುತ್ತದೆ | - |
| 14 | | ವಿಟ್ಲ | 3 | ನಿರ್ಮಾಣ ಹಂತದಲ್ಲಿರುತ್ತದೆ | - |
| **Total** | | | **163** | | |
| 1 | ಉಡುಪಿ | ಉಡುಪಿ | 10 | ನಿರ್ಮಾಣ ಹಂತದಲ್ಲಿರುತ್ತದೆ | - |
| 2 | | ಕುಂದಾಪುರ | 15 | ನಿರ್ಮಾಣ ಪೂರ್ಣಗೊಂಡು ಕಾರ್ಯ ನಿರ್ವಹಿಸಲಾಗುತ್ತಿದೆ | ಪುರಸಭೆ |
| 3 | | ಕಾರ್ಕಳ | 4 | ನಿರ್ಮಾಣ ಪೂರ್ಣಗೊಂಡಿರುತ್ತದೆ | ಪುರಸಭೆ |
| 4 | | ಕಾಪು | 4 | ನಿರ್ಮಾಣ ಪೂರ್ಣಗೊಂಡಿರುತ್ತದೆ | ಪುರಸಭೆ |
| 5 | | ಸಾಲಿಗ್ರಾಮ | 3 | ನಿರ್ಮಾಣ ಪೂರ್ಣಗೊಂಡಿರುತ್ತದೆ | ಪುರಸಭೆ |
| 6 | | ಬೈಂದೂರು | 4 | ನಿರ್ಮಾಣ ಹಂತದಲ್ಲಿರುತ್ತದೆ | - |
| **Total** | | | **30** | | |
| **Grand Total** | | | **193** | | |